
ತೊಡಗಿ ವೈಚಾರಿಕತೆಗೆ ಹೊರಳುವ ನಿದ್ದೆ ಬಾರದ ವೇಳೆ ಎದ್ದು ಕೂರುವ ವಿಚಾರಗಳು – ಈ ಸಂಕಲನದ ಮಹತ್ವ ಹೆಚ್ಚಿಸಿವೆ. ಹಲವು ಕಾದಂಬರಿ, ಕಥಾಸಂಕಲನಗಳು ಅಥವಾ ಕವನಸಂಗ್ರಹಗಳು ಕೊಡಬಲ್ಲ ಒಂದು ಅನುಭೂತಿಯನ್ನು ಒಂದೇ ಕೃತಿ ದೊರಕಿಸುವಂತಿದ್ದರೆ ಅದನ್ನೇ ಆರಿಸಿಕೊಳ್ಳುವುದು ಜಾಣತನವಾಗುತ್ತದೆ. ಅಕ್ಷರ ಅವರ ಈ ಪುಸ್ತಕ ಅಂಥ ಹಸಿವನ್ನು ನೀಗಿಸಬಲ್ಲ ಕಸುವನ್ನು ಹೊಂದಿದೆ.

**● ನರೇಂದ್ರ ಪೈ**

# ಚೇತೋಹಾರಿ ಚಾರುಶೀಲೆ

**ಇದೊಂದು** ವಿನೂತನ ಪ್ರೇಮ ಕಥಾನಕ. ಐಳನ್ ಧೀಮಣಿ ಮರುನ್ನದಿ ಚೆನ್ನೈನವನು. ಅಲ್ಲಿಯ ಐ.ಜಿ.ಪಿ ಇವನ ತಂದೆ. ತಮ್ಮ ಮಗನು ಎಲ್ಲರಂತೆ ಒಳ್ಳೆಯ, ಕೈತುಂಬ ಸಂಪಾದನೆ ಇರುವ ಕೆಲಸ ಹಿಡಿದು ಮದುವೆಯಾಗಿ ಸಂಸಾರವಂತನಾಗುವ ಬದಲು ಹಾಡು ಹಸೆ ಫೋಟೊಗ್ರಫಿ ಓದು ಬರಹ ಎಂದೆಲ್ಲ ಹಚ್ಚಿಕೊಂಡು ಅಂಡಲೆಯುತ್ತಿದ್ದಾನೆ ಎಂದು ಅವನ ತಂದೆತಾಯಿಯರಿಗೆ ಬೇಸರ, ಸಿಟ್ಟು. ಈ ಮನಸ್ತಾಪವು ಅದರ ಆತ್ಯಂತಿಕ ಹಂತವನ್ನು ತಲುಪಿದಾಗ, ತಂದೆತಾಯಿಗಳಿಗೆ ಹೇಳದೆ, ಐಳನು ಪೂರ್ವ ಕರಾವಳಿಯ ಪುರಿಗೆ ಬರುತ್ತಾನೆ. ಪುರಿಜಗನ್ನಾಥನ ರಥೋತ್ಸವದ ಸಂಭ್ರಮದಲ್ಲಿ ಮುಳುಗಿ ಹೋಗುತ್ತಾನೆ. ಅಲ್ಲಿ ಅವನು ಅಕಸ್ಮಾತ್ ಎಂಬಂತೆ ಹುಡುಗಿಯೊಬ್ಬಳನ್ನು ಭೇಟಿಯಾಗುತ್ತಾನೆ. ಅವಳದೂ ಇದೇ ಬಗೆಯ ಕತೆ. ಅವಳು ಕನ್ನಡ ಚಿತ್ರರಂಗದ ಸುಪ್ರಸಿದ್ಧ ನಟಿ ಇಂದೀವರೆ, ಬೆಂಗಳೂರಿನವಳು. ತನ್ನ ಸೆಲೆಬ್ರಿಟಿ ಸ್ಟೇಟಸ್ಸಿನಿಂದ ರೋಸಿ ಹೋಗಿ ತನ್ನಷ್ಟಕ್ಕೆ ಇರಬೇಕೆಂದು ಅವಳೂ ಯಾರಿಗೂ ಹೇಳದೆ ಪುರಿಗೆ ಬಂದಿದ್ದಾಳೆ. ತನ್ನನ್ನು ಮಾತಂಗಿ ಎಂಬ ಹೆಸರಿನಿಂದ ಅವನಿಗೆ ಪರಿಚಯಿಸಿಕೊಳ್ಳುತ್ತಾಳೆ. ಈ ಇಬ್ಬರು ಅಪರಿಚಿತರು ಎಲ್ಲ ಸಂಕೋಚಗಳನ್ನು ದಾಟಿ ಸ್ವಚ್ಛಂದವಾಗಿ ಮಾತನಾಡಿಕೊಂಡು ರಥೋತ್ಸವದ ಜನ ಜಂಗುಳಿ, ರಥ, ದೇವಸ್ಥಾನ, ಅರಮನೆ, ಪುರಿಯ ರಸ್ತೆಗಳಲ್ಲಿ ತಮ್ಮ ಜಂಟಿ ಆದರೆ ಗೊತ್ತು ಗುರಿಯಿಲ್ಲದ ಶೋಧವನ್ನು ಕೈಗೊಳ್ಳುವುದು ಈ ಕಾದಂಬರಿಯನ್ನು ಕಟ್ಟಿದೆ. ಐಳನ ಬಹುಮುಖಿ ಓದು – ಆಸಕ್ತಿಗಳು ಈ ಹೊಸ ಅನುಭವವನ್ನು ಕಥಿಸುತ್ತ, ಮಾತಂಗಿಗೆ ನಿರೂಪಿಸುತ್ತ ಪರ್ಯಾಯವಾಗಿ ಜಗನ್ನಾಥನ ರಥೋತ್ಸವದ ಕಥನವು ಇವರೀರ್ವರ ಪ್ರೇಮಕಥೆಯೊಂದಿಗೆ ಮಿಳಿತಗೊಳ್ಳುವ ಪರಿ ಈ ಕಾದಂಬರಿಯ ವಿಶೇಷ. ಭಾಷೆಯೊಂದಿಗೆ ಆಡುತ್ತಲೇ ವೈಯಕ್ತಿಕ ಅನುಭವವೊಂದನ್ನು ಸಾಮುದಾಯಿಕ ಆಚರಣೆಯ ಹಿನ್ನೆಲೆಯಲ್ಲಿ ಮಂಡಿಸುತ್ತ ಲೇಖಕರು ಓದುಗರಿಗೆ ಚೇತೋಹಾರಿಯಾದ ಓದನ್ನು ಉಣಬಡಿಸಿದ್ದಾರೆ. ಭಾವುಕತೆ, ತುಂಟತನ ಮತ್ತು ಬೌದ್ಧಿಕತೆಗಳು ಹದವಾಗಿ ಬೆರೆತ ಕಾದಂಬರಿ ಇದು.

**● ಟಿ.ಪಿ. ಅಶೋಕ**




ಪ್ರಿಯೇ ಚಾರುಶೀಲೆ
(ಕಾದಂಬರಿ)
ಲೇ: ನಾಗರಾಜ ವಸ್ತಾರೆ
ಪ್ರ: ಛಂದ ಪುಸ್ತಕ, ಬೆಂಗಳೂರು